ಹತ್ರ ಒಬ್ಬ ಮಾಸ್ತ್ರ ಮನೆ ಇತ್ತು. ಅವರ ಮನೆಯಲ್ಲಿ ರಾಮಾಯಣ, ಮಹಾಭಾರತ ಗ್ರಂಥಗಳೆಲ್ಲ ಇದ್ದವು. ಅವನ್ನೆಲ್ಲ ಓದ್ತಿದ್ದೆ. ಮನೆಗೆ ಕೊಂಡುಹೋಗ್ಲಿಕ್ಕೆ ಬಿಡ್ತಿರ್ಲಿಲ್ಲ, ಪುಸ್ತಕ ಹಾಳುಮಾಡ್ತಾರೆ ಅಂತ. 'ಇಲ್ಲೇ ಓದು ನೀನು' ಅಂತ್ಹೇಳಿ ಓದಲಿಕ್ಕೆ ಕೊಡ್ತಿದ್ರು. ಅಲ್ಲಿಯೇ ಕೂತು ಎಲ್ಲ ಕತೆಗಳನ್ನು ಓದುತ್ತಿದ್ದೆ. ಕತೆಗಳ ಬಗ್ಗೆ ಹುಚ್ಚು ಹಿಡಿಯಲಿಕ್ಕೆ ಸ್ಟಾರ್ಟ್ ಆದದ್ದು ಅಲ್ಲಿಂದ. ಆದರೆ ಅವೆಲ್ಲವೂ ನನ್ನ ಭೌತಿಕ ಬದುಕಿನಿಂದ ಹೊರಗೆ ಹೋಗಿ ಯೋಚಿಸುವಂಥ ಕಥೆಗಳೇ ಆಗಿರ್ತಿದ್ವು. ಬದುಕಿನಲ್ಲಿಯೇ ಕಥೆಗಳಿವೆ ಎಂದು ನಂತರ ಗೊತ್ತಾಯ್ತು. ಯಾಕೆ ಬರೆಯಬೇಕು? ಏನು ಬರೆಯಬೇಕು ಎಂದೆಲ್ಲ ಯೋಚಿಸಿ ಬರೆಯಲಿಕ್ಕೆ ಹೊರಟವನಲ್ಲ ನಾನು.

1973ರಲ್ಲಿ ನನ್ನ ಕಥೆ ಮೊದಲ ಬಾರಿಗೆ 'ಸುಧಾ' ಪತ್ರಿಕೆಯಲ್ಲಿ ಪ್ರಕಟವಾಯಿತು. 'ನಿಖಾ' ಅಂತ ಅದರ ಹೆಸರು. ಆಗ ಬ್ಯಾಂಕ್ ಕೆಲಸಕ್ಕೆ ಸೇರಿಕೊಂಡಿದ್ದೆ. ನಮ್ಮಲ್ಲಿ ಮದುವೆಗಳೆಲ್ಲ ವಿಶಿಷ್ಟ. ಅಲ್ಲಿ ಎಲ್ಲರೂ ಖುಷಿಯಲ್ಲಿರ್ತಾರೆ. ತಿಂಡಿ ತಿಂದುಕೊಂಡು, ಬಿರಿಯಾನಿ ಎಲ್ಲ ಊಟ ಮಾಡ್ಕೊಂಡು ಬಹಳ ಗಮ್ಮತ್ತಿನಲ್ಲಿರ್ತಾರೆ. ಆದರೆ ವಧು ಮಾತ್ರ ಇಡೀ ದಿನ ಅಳ್ತಾನೇ ಇರ್ತಾಳೆ. ಅದ್ಯಾಕೆ ಹಾಗೆ ಎಂಬುದು ನನಗಾಗ ಉತ್ತರಸಿಗದ ಪ್ರಶ್ನೆಯಾಗಿತ್ತು. ಆಗಲೇ ನಾನು 'ಅಕ್ಕನ ಮದುವೆ ಮತ್ತು ಆಡು' ಅಂತೊಂದು ಕಥೆ ಬರೆದಿದ್ದೆ. 'ನಿಖಾ' ಕಥೆ ಕೂಡ ಮದುವೆಗೆ ಸಂಬಂಧಪಟ್ಟಿದ್ದೇ.

ಪೌರಾಣಿಕ ಕಥೆಗಳನ್ನು ಬರೆಯುವುಕ್ಕಿಂತ ಬದುಕಿನ ಬಗ್ಗೆ ಬರೆದುಕೊಂಡು ಹೋಗುವುದೇ ಹೆಚ್ಚು ಇಷ್ಟವಾಗತೊಡಗಿತು. ಆದರೆ ನನ್ನ ಸುತ್ತಲಿನ ಯಾರು ಕೂಡ ಕಥೆ ಬರೆಯುವವರಿರಲಿಲ್ಲ. ಆದರೆ ಓದುವವರು ಇದ್ದರು. ಓದ್ತಾ ಇದ್ದೆವು, ಚರ್ಚೆ ಮಾಡ್ತಾ ಇದ್ದೆವು. ಆದರೆ ಬರೆಯಲಿಕ್ಕೆ ಹೊರಟವನು ನಾನೊಬ್ಬನೇ. ನನ್ನ ಬರವಣಿಗೆ ಬಹಳ ಶಾರ್ಪ್ ಆಗಿ ಹೊರಗೆಬರಲಿಕ್ಕೆ ಸಾಧ್ಯವಾದದ್ದು ನಾನು ಬ್ಯಾಂಕಿಗೆ ಸೇರಿದ ನಂತರ.

● ನೀವು ಕಥೆಯನ್ನು ಬರೆದ ಆರಂಭದ ದಿನಗಳಲ್ಲಿ ಒಟ್ಟಾರೆ ಸಮುದಾಯದ ಪ್ರತಿಕ್ರಿಯೆ ಹೇಗಿತ್ತು?

ಕಥೆಯನ್ನು ಬರೆಯುವಾಗ ನನ್ನ ತಲೆಯಲ್ಲಿ ಒಂದು ವಿಷಯ ಸ್ಪಷ್ಟವಾಗಿ ಇರ್ತದೆ. ನಾನು ಜನಗಳ ನಂಬಿಕೆಯನ್ನು ಪ್ರಶ್ನೆಮಾಡಲಿಕ್ಕೆ ಹೋಗೋದಿಲ್ಲ. ಸಮಾಜದವರು ತಿಳಿದುಕೊಳ್ಳುವುದಿದೆ ಎಂಬುದನ್ನಷ್ಟೇ ತೋರಿಸಲಿಕ್ಕೆ ಹೋಗ್ತೇನೆ. ನಾನು ಸ್ವಲ್ಪ ಸೌಮ್ಯವಾದಿ. ಆದ್ದರಿಂದ ನನ್ನ ಕಥೆಗೆ ದೊಡ್ಡ ಮಟ್ಟದ ಪ್ರತಿಕ್ರಿಯೆ ಏನೂ ಬರಲಿಲ್ಲ.

ಆದರೆ 'ಗೋರಿ ಕಟ್ಟಿಕೊಂಡವರು', 'ನೋಂಬು' ಕಥೆಗಳಿಗೆಲ್ಲ ಸ್ವಲ್ಪ ತೀಕ್ಷ್ಣವಾಗಿ ಪ್ರತಿಕ್ರಿಯೆ ಬಂತು. ಮಸೀದಿಯಲ್ಲೆಲ್ಲ ಪರ–ವಿರೋಧ ಚರ್ಚೆ ಆಗಿತ್ತು. 'ಒಂದು ಹಗಲು ಒಂದು ರಾತ್ರಿ' ಇದ್ದತ್ ಬಗ್ಗೆಯೇ ಇದ್ದರೂ ಸಾಮಾನ್ಯವಾಗಿ ಕಾಂಪ್ರೊಮೈಸ್ ರೀತಿಯಲ್ಲಿ ಇರದೆ ಸಮಾಜದ ಆಚರಣೆಯ ವಿರುದ್ಧ ಪ್ರತಿಭಟಿಸುತ್ತದೆ.

ಕೆಲವು ಕಥೆಗಳ ವಿರುದ್ಧ ನಡೆದ ಘಟನೆಗಳನ್ನೇ ಕಥೆಯಾಗಿಸಿದ್ದೂ ಇದೆ. ಆದರೆ ಅದನ್ನು ನನ್ನ ಲಾಭಕ್ಕಾಗಿ ಬಳಸಿಕೊಳ್ಳಲು ಇಷ್ಟ ಇರಲಿಲ್ಲ. ಆ ಕಥೆಯ ಪಾತ್ರಗಳು ಕೆಲವರನ್ನು ಚುಚ್ಚಬಹುದು. ನನ್ನ ಉದ್ದೇಶವೇ ಅವರನ್ನು ಚುಚ್ಚಬೇಕು; ಅರ್ಥಮಾಡಿಕೊಂಡು ಬದಲಾಗಬೇಕು ಎನ್ನುವುದು. ಅದರಲ್ಲಿ ಯಶಸ್ವಿಯಾಗಿದ್ದೇನೆ ಎಂದೇ ಭಾವಿಸುತ್ತೇನೆ.

ನನ್ನ ಕಥೆಗಳೆಲ್ಲವೂ ಕಟ್ಪಾಡಿ–ಬಾರ್ಕೂರಿನ ಅನುಭವಗಳನ್ನೇ ಆಧರಿಸಿದ್ದು. ನನ್ನಲ್ಲಿ ಇನ್ನೂ ಬೇಕಾದಷ್ಟು ಅನುಭವಗಳಿವೆ. ಯಾಕೆಂದರೆ ನನ್ನ ತಂದೆ ಖಾಜಿ ಆಗಿದ್ದರು. ಅವರು ಮಾಡುವ ನ್ಯಾಯತೀರ್ಮಾನ, ಅವರಿಗೆ ಬರುವ ದೂರುಗಳು, ಅವುಗಳನ್ನು ಇತ್ಯರ್ಥ ಮಾಡುವ ಬಗೆಯನ್ನು ನನಗೆ ಹೇಳುತ್ತಿದ್ದರು. ಅವರು ಚರ್ಚೆ ಮಾಡುವಾಗ ನಾನೂ ಹೋಗಿ ಕೂತು ನೋಡುತ್ತಿದ್ದೆ. ಅದನ್ನು